## ಉಪತಹಶೀಲ್ದಾರವರ ನ್ಯಾಯಾಲಯ, ಕೋಗಳಿ, ಹ.ಬೊ.ಹಳ್ಳಿ ತಾಲೂಕು.

ಸಂ/ಕಂ/ಪಹಣಿ/ವಿವಾದ/109/2015-16 ದಿನಾಂಕ:11.08.2016

ಉಪಸ್ಥಿತರು:-ವಿ.ಹೆಚ್.ಮಲ್ಲಿಕಾರ್ಜುನ,
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕೋಗಳಿ

| ಅರ್ಜಿದಾರರು | ತಕರಾರುದಾರರು |
|---|---|
| 1. ನುಪ್ನೆಮ್ಮ ಗಂಡ ಲೇಟ್ ಹುಲುಗಪ್ಪ<br>2. ಪಿ.ಮೂಗಬಸಪ್ಪ ತಂದೆ ಲೇಟ್ ದೊಡ್ಡಮೂಗಪ್ಪ<br>ಗ್ರಾಮ:-ಕನ್ನಿಹಳ್ಳಿ ತಾ:-ಹೆಚ್.ಬಿ.ಹಳ್ಳಿ | ಪಿಲ್ಮಂನಳ್ಳಿ ದೇವಪ್ಪ ತಂದೆ ಸಣ್ಣ ಮೂಗಪ್ಪ<br>ಗ್ರಾಮ:-ಕನ್ನಿಹಳ್ಳಿ ತಾ:-ಹೆಚ್.ಬಿ.ಹಳ್ಳಿ |

ವಿವಾದಿತಜಮೀನಿನ ವಿವರ:

| ಕ್ರ.ಸಂ. | ತಾಲೂಕು | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ(ಎಕರೆಗಳಲ್ಲಿ) | ತರಹೆ |
|---|---|---|---|---|---|
| 1. | ಹಗರಿಬೊಮ್ಮನಹಳ್ಳಿ | ನೆಲ್ಲುಕುದರಿ | 23/ಬಿ/2 | 2-52<br>1-66 | ಖುಷ್ಕಿ |
| 2. | ಹಗರಿಬೊಮ್ಮನಹಳ್ಳಿ | ನೆಲ್ಲುಕುದರಿ | 24/2 | 4-47 | " |

ಪೀಠಿಕೆ:-

ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ನೆಲ್ಲುಕುದರಿ ಗ್ರಾಮದ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ, ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕನ್ನಿಹಳ್ಳಿ ಗ್ರಾಮದ ನಿವಾಸಿಯಾದ ನುಪ್ನೆಮ್ಮ ಗಂಡ ಲೇಟ್ ಹುಲುಗಪ್ಪ, ಪಿ ಮೂಗಬಸಪ್ಪ ತಂದೆ ಲೇಟ್ ದೊಡ್ಡಮೂಗಪ್ಪ ಇವರು ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆಯನ್ನು ಮಾಡಲು ದಿನಾಂಕ:08.03.2016 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸನ್ನು ದಿನಾಂಕ:15.03.2016 ರಂದು ಜಾರಿಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ:16.03.2016 ರಂದು ಪಿಲ್ಮಂನಳ್ಳಿ ದೇವಪ್ಪ ತಂದೆ ಸಣ್ಣ ಮೂಗಪ್ಪ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ, ಎಂ.ಆರ್.ನಂ.35/15-16ರ ಕಡತವು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಕೋಗಳಿ ಇವರು ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷಕಾರರಿಗೆ ದಿನಾಂಕ:23.06.2016ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಜಾರಿ ಮಾಡಲಾಯಿತು.

ಪ್ರಕರಣವನ್ನು ದಿನಾಂಕ:23.06.2016 ರಿಂದ 27.07.2016 ರವರೆಗೆ ವಿಚಾರಣೆಯನ್ನು ಮಾಡಲಾಯಿತು. ಉಭಯರು ಹಾಜರಾಗಿರುತ್ತಾರೆ. ತಕರಾರುದಾರರು ಹೇಳುವಂತೆ; ಪ್ರಕರಣದಲ್ಲಿ, ಸ.ನಂ.23/ಬಿ ವಿಸ್ತೀರ್ಣ 8-27 ಎಕರೆ ಜಮೀನು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ನ್ಯಾಯಾಲಯದ ಸಂಖ್ಯೆ ಸಂ:ಕಂ:ಪಹಣಿ:ಅಪೀಲು:38:2015-16 ದಿನಾಂಕ:14.08.2015 ರನ್ವಯ ಪ್ರಕರಣ ನಡೆಯುತ್ತಿರುವುದರಿಂದ ಸದರಿ ಜಮೀನು ಹೊರತು ಪಡಿಸಿ ಹಕ್ಕು ಬದಲಾವಣೆ ಮಾಡಲು ಹೇಳಿಕೆಯನ್ನು ನೀಡಿರುತ್ತಾರೆ. ಹಾಗೂ ಸದರಿ ಪ್ರಕರಣದ ವಿಚಾರಣಾ ನೋಟೀಸು-3 ರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಪುಟ-2ಕ್ಕೆ...

ಮುಂದುವರೆದು, ಪ್ರಕರಣದಲ್ಲಿ ಅರ್ಜಿದಾರರು ಹಾಜರಾಗಿ ಹೇಳುವಂತೆ; ಸದರಿ ಪ್ರಕರಣದಲ್ಲಿ ಸ.ನಂ.23ಬಿ/2 ವಿಸ್ತೀರ್ಣ 2-52 ಎಕರೆ ಮತ್ತು ಜಂಟಿ ವಿಸ್ತೀರ್ಣ 1-66 ಎಕರೆ ಜಮೀನು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿರುವ ಪ್ರಯುಕ್ತ, ಸದರಿ ಸ.ನಂ. ಹೊರತು ಪಡಿಸಿ, ಉಳಿದ ಸ.ನಂ.24/2 ವಿಸ್ತೀರ್ಣ 4-47 ಎಕರೆ ಜಮೀನಿಗೆ ನಮ್ಮ ಜೊತೆ ಸಹೋದರಿಯಾದ ತಿಂದಮ್ಮ ತಂದೆ ಪಿ ದೊಡ್ಡ ಮೂಗಪ್ಪ ಇವರ ಹೆಸರಿಗೆ ಜಂಟಿಯಾಗಿ ಪೌತಿ ವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಮೌಖಿಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ.

ಪ್ರಕರಣದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ನೀಡಿದ ಹೇಳಿಕೆ ಮತ್ತು ದಾಖಲೆಗಳನ್ನು ಪರಿಶೀಲನೆ ಮಾಡಲಾಗಿ, ಪ್ರಕರಣದಲ್ಲಿ, ಸ.ನಂ.23/ಬಿ ವಿಸ್ತೀರ್ಣ 8-27 ಎಕರೆ ಜಮೀನು ಮಾನ್ಯ ಸಹಾಯಕ ಆಯುಕ್ತರು, ಹೊಸಪೇಟೆ ಇವರ ನ್ಯಾಯಾಲಯದ ಸಂಖ್ಯೆ ಸಂ:ಕಂ:ಪಹಣಿ:ಅಪೀಲು:38:2015-16 ದಿನಾಂಕ:14.08.2015 ರನ್ವಯ ನಡೆಯುತ್ತಿರುವ ಪ್ರಯುಕ್ತ, ಸದರಿ ಗ್ರಾಮದ ಸ.ನಂ. 23/ಬಿ/2 ವಿಸ್ತೀರ್ಣ 2-52, 1-66 ಎಕರೆ ಜಮೀನು ಹೊರತು ಪಡಿಸಿ, ಸದರಿ ಗ್ರಾಮದ ಸ.ನಂ.24/2 ವಿಸ್ತೀರ್ಣ 4-47 ಎಕರೆ ಜಮೀನಿಗೆ ಅರ್ಜಿದಾರರ ಜೊತೆಗೆ ತಿಂದಮ್ಮ ತಂದೆ ಪಿ.ದೊಡ್ಡ ಮೂಗಪ್ಪ ಇವರ ಹೆಸರಿಗೆ ಜಂಟಿಯಾಗಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಈ ಕೆಳಕಂಡಂತೆ ಆದೇಶ;

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಎಂ.ಆರ್.ನಂ.35/2015-16ರ ಪ್ರಕಾರ, ಪ್ರಕರಣದಲ್ಲಿ ನೆಲ್ಲುಕುದರಿ ಗ್ರಾಮದ ಸ.ನಂ. 23/ಬಿ/2 ವಿಸ್ತೀರ್ಣ 2-52, 1-66 ಎಕರೆ ಜಮೀನಿಗೆ ಯಥಾಸ್ಥಿತಿ ಕಾಯ್ದುಕೊಳ್ಳಲು ಹಾಗೂ ಸದರಿ ಗ್ರಾಮದ ಸ.ನಂ.24/2 ವಿಸ್ತೀರ್ಣ 4-47 ಎಕರೆ ಜಮೀನಿಗೆ ಅರ್ಜಿದಾರರಾದ ನುಪ್ಪೆಮ್ಮ ಗಂಡ ಲೇಟ್ ಹುಲುಗಪ್ಪ, ಪಿ ಮೂಗಬಸಪ್ಪ ತಂದೆ ಲೇಟ್ ದೊಡ್ಡಮೂಗಪ್ಪ ಜೊತೆಗೆ ತಿಂದಮ್ಮ ತಂದೆ ಪಿ ದೊಡ್ಡ ಮೂಗಪ್ಪ ಇವರ ಹೆಸರಿಗೆ ಜಂಟಿಯಾಗಿ ಪೌತಿ ವಾರಸು ಪ್ರಕಾರ ಹಕ್ಕುಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:11.08.2016 ರಂದು ತೆರದ ನ್ಯಾಯಾಲಯದಲ್ಲಿ ಘೋಷಿಸಿದೆ.

11/8/16

[ವಿ.ಹೆಚ್.ಮಲ್ಲಿಕಾರ್ಜುನ]
ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,ಕೋಗಳಿ

ಉಪ ತಹಸಿಲ್ದಾರ್,
ನಾಡ ಕಛೇರಿ,
ಕೋಗಳಿ.

ಪ್ರತಿಯನ್ನು:-

1. ಅರ್ಜಿದಾರರು ಮತ್ತು ತಕರಾರುದಾರರಿಗೆ.
2. ಭೂಮಿಕೇಂದ್ರ, ತಾಲೂಕು ಕಛೇರಿ, ಹಗರಿಬೊಮ್ಮನಹಳ್ಳಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ಕಂದಾಯ ನಿರೀಕ್ಷಕರು, ಕೋಗಳಿ.
4. ಶುದ್ಧಪ್ರತಿ ಕಡತಕ್ಕೆ.